ಶ್ರೀ ಡಿ. ದೇವರಾಜ ಅರಸ್. — ಅದು ನಿಮ್ಮ ಅಭಿಪ್ರಾಯ.

ಶ್ರೀ ಎಂ. ಚಂದ್ರಶೇಖರ್. — ಸ್ವಾಮಿ, ಈ ವಿಚಾರದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಎಲ್ಲಾ ತಾಲ್ಲೂಕಿನಿಂದಲೂ ಒಂದು ಪಟ್ಟಿಯನ್ನು ತಯಾರು ಮಾಡಿ ತಮಗೆ ಕಳಿಸಿದ್ದಾರೆ ಎಂದು ನನಗೆ ಗೊತ್ತಾಗಿದೆ. ತಾವು ಈಗ ಯಾರ್ಯಾರು ಯಾವ್ಯಾವ ಕಡೆ ಇದ್ದಾರೆ ಎಂಬುದು ಗೊತ್ತಿಲ್ಲ ಎಂದು ಹೇಳುತ್ತಿದ್ದೀರಿ. ಮಾನ್ಯ ವಿರೋಧಪಕ್ಷದ ನಾಯಕರು ಕಳಿಸಿದಂಥ ಪಟ್ಟಿಯಲ್ಲಿ ತಾವು ಇದನ್ನು ನೋಡ ಬಹುದಾಗಿತ್ತು ಅಲ್ಲವೇ ?

ಶ್ರೀ ಡಿ. ದೇವರಾಜ ಅರಸ್. — ಸ್ವಾಮಿ, ಇದರಲ್ಲಿ ಸರ್ಕಾರದ ನೀತಿ ಏನಿದೆ ಅದನ್ನು ನಾವು ಅನುಸರಿಸತಕ್ಕಂಥಾದ್ದು ಇದೆ. ಯಾವ ಸರ್ಕಾರವಾಗಲೀ ಅದನ್ನೇ ಮಾಡುತ್ತದೆ. ಅವರಿಗೆ ಕೊಡಲೇ ಬೇಕು ಎಂದು ಇಲ್ಲ ; ಅದನ್ನು ಕಂಸಿಡರ್ ಮಾಡುತ್ತೇವೆ ಅಥವಾ ಬಿಡುತ್ತೇವೆ.

ಶ್ರೀ ಪಿ. ರಾಮದೇವ್. — ಸ್ವಾಮಿ, ಇದರಲ್ಲಿ ನಮ್ಮ ದೃಷ್ಟಿಯಿಂದ ನೋಡಿದರೆ ಒಹಳ ಅನ್ಯಾಯವಾಗಿದೆ. ಈ ವಿಚಾರದಲ್ಲಿ ನಾವು ಶಿಫಾರಸ್ಸು ಮಾಡಿರತಕ್ಕಂಥ ಹೆಸರುಗಳು ಈ ಲಿಸ್ಟ್‌ನಲ್ಲಿ ಇಲ್ಲ. ದಯವಿಟ್ಟು ತಾವು ಇದನ್ನು ಪುನರ್‌ಪರಿಶೀಲನೆ ಮಾಡಿ ನಾವು ಕೊಟ್ಟಿರತಕ್ಕಂಥ ಹೆಸರುಗಳನ್ನು ಈ ಲಿಸ್ಟ್‌ನಲ್ಲಿ ಸೇರಿಸುವುದಕ್ಕೆ ತಾವು ಆದ್ಯತೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್. — ಆಗಲಿ ಸ್ವಾಮಿ, ಯೋಚನೆ ಮಾಡೋಣ. ನಾವು ಇದೇ ಮನವಿಯನ್ನು ಕೇಂದ್ರ ಸರ್ಕಾರದವರಿಗೆ ಮಾಡಿದಾಗ ನಾವು ಕಳಿಸಿದಂಥ ಲಿಸ್ಟ್‌ನಲ್ಲಿ ಎಷ್ಟೋ ವೆಂಬರ್ಸ್‌ನ್ನು ಕಿತ್ತುಹಾಕಿದ್ದಾರೆ. ಆ ರೀತಿ ಮಾಡುವುದಕ್ಕೆ ನನಗೆ ಇಚ್ಛೆ ಇಲ್ಲ. ನಾವು ಇದನ್ನು ಕನ್‌ಸಿಡರ್ ಮಾಡುತ್ತೇವೆ.

National Rural Water Supply Schemes in Sadalga area

895 SRI A. B. BEDGE (Sadalga) — Will the Minister for Rural Development and Panchayat Raj be pleased to state: —

(a) the number of N R. W. S. Schemes completed so far in Sadalga Block, Belgaum District ;

(b) the number of schemes which are now in the completion stage ;

(c) the number of schemes which are remaining incomplete for want of Rig machines in Sadalga Block and the n mes of such places ;

(d) the reaso is for non-completion of the same ?

SRI K. PRABHAKAR — (Minister for Rural Development and Panchayat Raj)—

(a) 6

(b) —

(c) None.

(d) Out of four wa er supply schemes remaining incomplete, it has not been possible to complete the Mangoor Water Supply schemes as the sanction to its estimate was accorded recently.

The reasons for non.completion of the remaining 3 Water Supply Schemes viz., Borgaon Kagaholli and Sriwad–Junawad are the non–availability of sufficient number of contractors and the water sources.

ಶ್ರೀ ಎ. ಬಿ. ಬೆಡಗೆ.— ಸ್ವಾಮಿ, ಬೆಳಗಾಂ ಜಿಲ್ಲೆಯ ಸದಲಗಾ ಭಾಗದಲ್ಲಿ ಈವರೆಗೆ ಪೂರ್ತಿ ಗೊಂಡ ಎನ್. ಆರ್. ಡಬ್ಲ್ಯೂ. ಎಸ್. ಯೋಜನೆಗಳ ಸಂಖ್ಯೆ ೬ ಎಂದು ಹೇಳಿದ್ದೀರಿ. ಈ ಆರರಲ್ಲಿ ಭೋಜಿ ಗ್ರಾಮವೂ ಸೇರಿದೆಯೇ ?

† ಶ್ರೀ ಕೆ. ಪ್ರಭಾಕರ್.— ಆ ಗ್ರಾಮವೂ ಇದೆ.

ಶ್ರೀ ಎ. ಬಿ. ಬೆಡಗೆ. — ಸ್ವಾಮಿ, ನಮ್ಮ ಸದಲಗಾ ಭಾಗದಲ್ಲಿ ಈ ಎನ್. ಆರ್. ಡಬ್ಲ್ಯೂ. ಎಸ್. ಸ್ಕೀಮ್ ಬಗ್ಗೆ ಕೆಲಸಗಳು ಪ್ರಾರಂಭವಾಗಿ ಎಷ್ಟೋ ದಿನಗಳಾಗಿವೆ. ಈ ಸ್ಕೀಂನಲ್ಲಿ ಸರ್ಕಾರದ ತಪ್ಪಿನಿಂದಾಗಿ ಎಷ್ಟೋ ಕುಂದುಕೊರತೆಗಳು ಆಗಿ ಕೆಲವು ಗ್ರಾಮಗಳಲ್ಲಿ ಈ ಯೋಜನೆ ಪೂರ್ತಿ ಫೈಲ್ಯೂರ್ ಆಗಿದೆ. ಅಂತಹ ಗ್ರಾಮಗಳ ವತಿಯಿಂದ ತಮಗೆ ದೂರುಗಳು ಬಂದಿಲ್ಲವೇ ?

ಶ್ರೀ ಕೆ. ಪ್ರಭಾಕರ್.— ಅಂತಹ ದೂರುಗಳು ಸರ್ಕಾರದ ಗಮನಕ್ಕೆ ಬಂದಿಲ್ಲ. ನೀವು ಹೇಳಿದ ಮೇಲೆ ಅಂತಹ ತೊಂದರೆಗಳು ಇದೆಯೆಂದು ನಮಗೆ ಮನನವಾಗಿದೆ.

ಶ್ರೀ ಎ. ಬಿ. ಬೆಡಗೆ.— ಸ್ವಾಮಿ, ಇದರಲ್ಲಿ ಆಗಿರತಕ್ಕಂಥ ತೊಂದರೆ ಹೀಗಿದೆ. ೧೦ ವರ್ಷಗಳ ಹಿಂದೆ ಆದಂಥ ಈ ಎನ್. ಆರ್. ಡಬ್ಲ್ಯೂ. ಎಸ್. ಸ್ಕೀಂನಲ್ಲಿ ತಮ್ಮ ಇಲಾಖೆಯ ಇಂಜಿನಿಯರ್‌ಗಳು ಬೇಡವಾದ ಪೈಪ್‌ಗಳನ್ನು ಹಾಕಿಸಿರುವುದರಿಂದ ನೀರು ಸರಬರಾಜು ಆಗದೇ ಈ ಯೋಜನೆ ಸಂಪೂರ್ಣವಾಗಿ ಫೈಲ್ಯೂರ್ ಆಗಿದೆ. ಆ ಊರುಗಳಲ್ಲಿ ಈ ಒಂದು ಸ್ಕೀಂ ಇದ್ದರೂ ಕೂಡ ಜನರಿಗೆ ನೀರಿನ ಲಭ್ಯ ಇಲ್ಲವಾಗಿದೆ. ತಮ್ಮ ಖಾತೆಯ ವತಿಯಿಂದ ಅವುಗಳನ್ನು ಏನಾದರೂ ರಿಪೇರಿ ಮಾಡಿಸಬೇಕೆಂದರೆ ರಿಪೇರಿಗಾಗಿ ೮ ಲಕ್ಷ ರೂಪಾಯಿಗಳಷ್ಟು ಅಂದಾಜಾಗಿದೆ. ತಮ್ಮ ನಿಯಮಗಳ ಪ್ರಕಾರ ಆಪರು ೮೦ ಸಾವಿರ ರೂಪಾಯಿಗಳ ಪಂತಿಗೆಯನ್ನು ಕೊಡಬೇಕಾಗಿದೆ ; ಈ ಸ್ಕೀಂ ಪೂರ್ತಿಗೊಳ್ಳುವ ಸಲುವಾಗಿ ಅವಶ್ಯಕವಾದ ವಂತಿಗೆಯನ್ನು ತುಂಬಿಕೊಟ್ಟಿದ್ದರೂ ಕೂಡ ತಮ್ಮ ಅಧಿಕಾರಿಗಳಿಂದ ಆದಂಥ ತಪ್ಪಿಗೆ ಜವಾಬ್ದಾರರು ಯಾರು ?

ಶ್ರೀ ಕೆ. ಪ್ರಭಾಕರ್.— ಅಧಿಕಾರಿಗಳಿಂದ ತಪ್ಪಾಗಿದೆ ಎನ್ನುವ ಬಗ್ಗೆ ನನ್ನಲ್ಲಿ ವಿವರ ಇಲ್ಲ ಬಹುತೇಕ ಲಕ್ಷಾಂತರ ರೂಪಾಯಿಗಳ ಹಣ ಖರ್ಚಾಗುವ ರೀತಿಯಲ್ಲಿ ಅದು ಕೆಟ್ಟುಹೋಗಿದೆಯೆಂದು ಹೇಳಿದ್ದಾರೆ ; ಅದನ್ನು ಪರೀಕ್ಷೆ ಮಾಡಿಸಿ ಅದು ಏನು ಎಂಬುದನ್ನು ಗೊತ್ತು ಮಾಡುತ್ತೇನೆ.

ಶ್ರೀ ಎ. ಬಿ. ಬೆಡಗೆ.— ಲಕ್ಷಾಂತರ ರೂಪಾಯಿಗಳು ಅಲ್ಲ ಸ್ವಾಮಿ, ಇದರಲ್ಲಿ ತಮ್ಮ ಅಧಿಕಾರಿಗಳಿಂದ ತಪ್ಪಾಗಿರುವುದರಿಂದ ಆ ಅಧಿಕಾರಿಗಳ ಮೇಲೆ ಕೇಸ್ ಹಾಕಿದ ಮೇಲೆ ಕೆಲವರು ಸಸ್ಪೆಂಡ್ ಆಗಿಹೋದರು. ಇಂತಹ ಪ್ರಕರಣ ಕೂಡ ನಡೆದಿದೆ. ತಮ್ಮ ಖಾತೆಯ ಅಧಿಕಾರಿಗಳ ತಪ್ಪಿನ ಪರಿಣಾಮವಾಗಿ ಎಷ್ಟೋ ವರ್ಷಗಳಿಂದ ಆ ಜನರು ಕುಡಿಯುವ ನೀರಿನ ಭವಣೆಯಿಂದ ಒದ್ದಾಡುತ್ತಿದ್ದಾರೆ. ಆವರು ಪುನಃ ೮೦ ಸಾವಿರ ರೂಪಾಯಿಗಳ ವಂತಿಗೆಯನ್ನು ತುಂಬಿಕೊಟ್ಟು. ಹೊಸ ಸ್ಕೀಂನ್ನು ಮಾಡಬೇಕು ಎಂದರೆ ಅದು ಸಾಧ್ಯವಿಲ್ಲ. ಅದಕ್ಕಾಗಿ ತಮ್ಮ ಅಧಿಕಾರಿಗಳ ತಪ್ಪಿನಿಂದ ಆದ ಅನಾಹುತವನ್ನು ಸುಧಾರಿಸಿಕೊಂಡು, ಸರ್ಕಾರ ಆ ಜವಾಬ್ದಾರಿಯನ್ನು ವಹಿಸಿಕೊಂಡು ಆ ಜನರಿಗೆ ನೀರು ಲಭ್ಯವಾಗುವಂತೆ ಮಾಡಬಲ್ಲಿರಾ ?

ಶ್ರೀ ಕೆ. ಪ್ರಭಾಕರ್.— ಆ ಕಾಮಗಾರಿ ಕೆಲಸಗಳನ್ನೆಲ್ಲಾ ಪರೀಕ್ಷೆ ಮಾಡಿಸಿ ಅದನ್ನೆಲ್ಲಾ ಸರಿಮಾಡಿಸಿ ಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು — ಇಲ್ಲಿಗೆ ಪ್ರಶ್ನೋತ್ತರಗಳು ಮುಗಿದವು. ಈಗ ಗಮನಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.